**All India Radio: Bangalore**
**National Bulletin In Kannada**
**13.03.2025 13.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**13.03.2025 13.10 p.m.**
**<><><><>**

ಮುಖ್ಯಾಂಶಗಳು

1. ನೆರೆಯ ರಾಷ್ಟ್ರಗಳ ಸಹಾಯಕ್ಕೆ ಭಾರತ ಸದಾ ಮುಂದು - ಸ್ಪೀಕರ್ ಓಂ ಬಿರ್ಲಾ
2. ಅತ್ಯಾಧುನಿಕ ರಡಾರ್ ಖರೀದಿಗೆ ಬಿಇಎಲ್‌ನೊಂದಿಗೆ ರಕ್ಷಣಾ ಸಚಿವಾಲಯ ಒಪ್ಪಂದಕ್ಕೆ ಸಹಿ
3. ದೆಹಲಿಯಲ್ಲಿಂದು ಸಂಜೆ ವೇವ್ಸ್ ೨೦೨೫ ಪೂರ್ವಭಾವಿ ಸಭೆ : ಸಚಿವರಾದ ಅಶ್ವಿನಿ ವೈಷ್ಣವ್, ಡಾ. ಜೈಶಂಕರ್ ಮತ್ತಿತರರು ಭಾಗಿ
4. ದೇಶದೆಲ್ಲೆಡೆ ಸಡಗರ ಸಂಭ್ರಮದ ಹೋಳಿ ಆಚರಣೆ
5. ದೆಹಲಿಯಲ್ಲಿ ನಡೆಯುತ್ತಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ಇಂದು ತೆರೆ

<><><><>

ಭಾರತ ಸಂಕಷ್ಟ ಪರಿಸ್ಥಿತಿ ಸೇರಿದಂತೆ ಎಲ್ಲ ಸಂದರ್ಭಗಳಲ್ಲೂ ನೆರೆಯ ರಾಷ್ಟ್ರಗಳ ಸಹಾಯಕ್ಕೆ ಸದಾ ಮುಂಚೂಣಿಯಲ್ಲಿರುತ್ತದೆ ಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ. ಅವರು, ಮಡಗಾಸ್ಕರ್‌ನ ಸಂಸದೀಯ ನಿಯೋಗದೊಂದಿಗೆ ದೆಹಲಿಯಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ವೇಳೆ ಅವರು, ಭಾರತ ಮಡಗಾಸ್ಕರ್‌ನ್ನು ತನ್ನ ವಿಶ್ವಾಸರ್ಹ ಮಿತ್ರನೆಂದು ಪರಿಗಣಿಸಿದೆ ಮತ್ತು ಪ್ರಗತಿಯ ತನ್ನ ಪಯಣದಲ್ಲಿ ಸ್ಥಿರ ಪಾಲುದಾರನೆಂದು ಗುರುತಿಸಿದೆ ಎಂದರು.

ಧ್ವನಿ : ಓಂಬಿರ್ಲಾ (೨೨ ಸೆಕೆಂಡ್‌ಗಳು)

<><><><>

ಸುಮಾರು ೨ ಸಾವಿರದ ೯೦೬ ಕೋಟಿ ರೂಪಾಯಿ ವೆಚ್ಚದಲ್ಲಿ ಭೂಕೇಂದ್ರಿತ ಅಶ್ವಿನಿ ರಡಾರ್ ಖರೀದಿಗೆ ರಕ್ಷಣಾ ಸಚಿವಾಲಯ ಗಾಜಿಯಾಬಾದ್‌ನ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಈ ರಡಾರ್ ಅನ್ನು ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿದ್ದು, ಭಾರತದ ವಾಯು ಸರ್ವೇಕ್ಷಣ ಸಾಮರ್ಥ್ಯವನ್ನು ವೃದ್ಧಿಸುವ ಸಲುವಾಗಿ ಡಿಆರ್‌ಡಿಒ ದ ಎಲೆಕ್ಟ್ರಾನಿಕ್ಸ್ ಮತ್ತು ರಡಾರ್ ಅಭಿವೃದ್ಧಿ ಘಟಕ ಅದನ್ನು ವಿನ್ಯಾಸಗೊಳಿಸಿದೆ. ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಈ

ರಡಾರ್ ಆಗಸದಲ್ಲಿ ಮಾನವರಹಿತ ವಿಮಾನ ಹಾಗೂ ಹೆಲಿಕಾಪ್ಟರ್‌ಗಳನ್ನು ಗುರಿಯಾಗಿಟ್ಟುಕೊಂಡು ಕಾರ್ಯನಿರ್ವಹಿಸಲಿದೆ.

<><><>

ಮುಂಬೈನಲ್ಲಿ ನಡೆಯಲಿರುವ ವಿಶ್ವ ಧ್ವನಿ ದೃಶ್ಯ ಮತ್ತು ಮನರಂಜನಾ ಶೃಂಗಸಭೆ-ವೇವ್ಸ್ ೨೦೨೫ಗೆ ಪೂರ್ವಭಾವಿಯಾಗಿ ಜಾಗತಿಕ ಸಮುದಾಯವನ್ನು ಸಂಪರ್ಕಿಸುವ ಎಲ್ಲಾ ಪ್ರಯತ್ನಗಳನ್ನು ಭಾರತ ಸರ್ಕಾರ ಕೈಗೊಂಡಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ವಿದೇಶಾಂಗ ಸಚಿವ ಡಾ. ಜೈಶಂಕರ್, ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ರಾಜ್ಯ ಸಚಿವ ಡಾ. ಎಲ್. ಮುರುಗನ್ ನವದೆಹಲಿಯಲ್ಲಿ ಇಂದು ಸಂಜೆ ಪೂರ್ವಭಾವಿ ಸಭೆ ಕರೆದಿದ್ದು, ಇದರಲ್ಲಿ ಅತಿಥ್ಯ ರಾಜ್ಯವಾದ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಭಾಗವಹಿಸಲಿದ್ದಾರೆ. ವೇವ್ಸ್ ಶೃಂಗಸಭೆಯನ್ನು ಜಾಗತಿಕ ವೇದಿಕೆಯಾಗಿ ಪರಿವರ್ತಿಸಿ ೧೦೦ಕ್ಕೂ ಅಧಿಕ ರಾಯಭಾರಿಗಳನ್ನು ಭಾಗವಹಿಸುವಂತೆ ಮಾಡಲು ಅಗತ್ಯ ಕ್ರಮಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು. ವೇವ್ಸ್ ಲಾಂಛನದಡಿ ಸಾಮರಸ್ಯ ಮತ್ತು ಮಾಧ್ಯಮ ಹಾಗೂ ಮನರಂಜನಾ ಕ್ಷೇತ್ರದ ಬೆಳವಣಿಗೆಗೆ ಪೂರಕ ವಾತಾವರಣ ಕಲ್ಪಿಸಲು ಈ ಶೃಂಗಸಭೆ ಮಹತ್ವದ ವೇದಿಕೆಯಾಗಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಮೇ ೧ ರಿಂದ ೪ರವರೆಗೆ ನಡೆಯುವ ನಾಲ್ಕು ದಿನಗಳ ಶೃಂಗಸಭೆಯನ್ನು ಜಾಗತಿಕ ಮಟ್ಟದ ಮಾಧ್ಯಮ ಸಂವಾದ ವೇದಿಕೆಯಾಗಿ ರೂಪಿಸುವುದು ಸರ್ಕಾರದ ಉದ್ದೇಶವಾಗಿದೆ.

<><><>

ಬಣ್ಣದ ಹಬ್ಬ ಹೋಳಿಯನ್ನು ಇಂದಿನಿಂದ ದೇಶಾದ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಈ ಹಬ್ಬವನ್ನು ದೇಶದ ಹಲವು ರಾಜ್ಯಗಳಲ್ಲಿ ಬೇರೆ ಬೇರೆ ಹೆಸರಿನಲ್ಲಿ ವೈವಿಧ್ಯಮಯವಾಗಿ ಆಚರಿಸಲಾಗುವುದು. ಉತ್ತರಪ್ರದೇಶದ ವಾರಾಣಸಿ ಮತ್ತು ಬ್ರಜ್ ಪ್ರದೇಶದಲ್ಲಿ ಹೋಳಿ ಸಂಭ್ರಮಾಚರಣೆ ಆರಂಭವಾಗಿದ್ದು, ಗೊರಕ್‌ಪುರದಲ್ಲಿ ನಡೆಯಲಿರುವ ಹೋಳಿ ದಹನ ಶೋಭಯಾತ್ರೆಯಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಭಾಗವಹಿಸಲಿದ್ದಾರೆ. ಹೋಳಿ ಹಿನ್ನೆಲೆಯಲ್ಲಿ ಉತ್ತರಪ್ರದೇಶದಲ್ಲಿ ವ್ಯಾಪಕ, ಭದ್ರತಾ ಏರ್ಪಾಡನ್ನು ಮಾಡಲಾಗಿದೆ. ರಾಜಸ್ಥಾನದಲ್ಲೂ ಹೋಳಿ ಸಡಗರ ಸಂಭ್ರಮ ಬಿರುಸಿನಿಂದ ಸಾಗಿದೆ. ಹಲವೆಡೆ ಹೋಳಿ ದಹನ, ಕಾರ್ಯಕ್ರಮಗಳು ನಿಗದಿಯಾಗಿದೆ. ಹೋಳಿ ಆಚರಣೆಗಾಗಿ ಹೆಚ್ಚಿನ ಸಂಖ್ಯೆಯ ವಿದೇಶಿಯರು

ಜೈಪುರ್ ಮತ್ತು ಅಜ್ಮೆರ್‌ಗೆ ಆಗಮಿಸಿದ್ದಾರೆ. ಎಲ್ಲೆಡೆ ಬಣ್ಣಗಳ ಓಕುಳಿ ಹಾಗೂ ರಂಗು ರಂಗಿನ ಸಿದ್ಧತೆಗಳು ನಡೆದಿವೆ.

ಧ್ವನಿ : ಜಿತೇಂದ್ರ (೪೫ ಸೆಕೆಂಡ್‌ಗಳು)

ಮಧ್ಯಪ್ರದೇಶದಲ್ಲೂ ಹೋಳಿಯನ್ನು ಜನರು ಪರಸ್ಪರ ಬಣ್ಣ ಹಚ್ಚಿಕೊಂಡು ಸಿಹಿ ತಿನಿಸು ವಿನಿಮಯ ಮಾಡಿಕೊಂಡು ಆಚರಿಸುತ್ತಾರೆ. ಉತ್ತರಾಖಂಡದಲ್ಲಿ ಜನರು ಸಾಂಪ್ರದಾಯಿಕ ಧಿರಿಸಿನೊಂದಿಗೆ ದೇವಾಲಯಗಳಿಗೆ ಭೇಟಿ ನೀಡಿ, ಜಾನಪದ ನೃತ್ಯದೊಂದಿಗೆ ಹೋಳಿ ಸಂಭ್ರಮಾಚರಣೆಯಲ್ಲಿ ತೊಡಗಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಹೋಳಿ ಆಚರಣೆ ಅದ್ದೂರಿಯಾಗಿ ನಡೆದಿದೆ.

<><><>

ಎರಡು ದಿನಗಳ ಐತಿಹಾಸಿಕ ಹಾಗೂ ಫಲಪ್ರದ ಮಾರಿಷಸ್ ಪ್ರವಾಸವನ್ನು ಪೂರ್ಣಗೊಳಿಸಿದ ಬಳಿಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕಳೆದ ಮಧ್ಯರಾತ್ರಿ ದೆಹಲಿಗೆ ವಾಪಸ್ಸಾದರು. ಪ್ರಧಾನಿ ಅವರ ಭೇಟಿ ಸಮಯದಲ್ಲಿ ಭಾರತ ಮತ್ತು ಮಾರಿಷಸ್ ತಮ್ಮ ಸಂಬಂಧಗಳನ್ನು ವೇಗವರ್ಧಿತ ಕಾರ್ಯತಂತ್ರದ ಪಾಲುದಾರಿಕೆ ಹಂತಕ್ಕೆ ಏರಿಸಿವೆ ಮತ್ತು ಸಾಗರ ಭದ್ರತೆ ಸೇರಿದಂತೆ ಹಲವು ವಲಯಗಳಲ್ಲಿ ಸಹಕಾರವನ್ನು ಹೆಚ್ಚಿಸಲು ಮತ್ತು ಸ್ಥಳೀಯ ಕರೆನ್ಸಿಗಳಲ್ಲಿ ವ್ಯಾಪಾರ ಉತ್ತೇಜಿಸಲು ಎರಡೂ ದೇಶಗಳು ಒಟ್ಟು ಎಂಟು ಒಪ್ಪಂದಗಳಿಗೆ ಸಹಿ ಹಾಕಿವೆ. ಮಾರಿಷಸ್‌ನ ಪೋರ್ಟ್ ಲೂಯಿಸ್‌ನಲ್ಲಿ ನಿನ್ನೆ ಸಂಜೆ ಪ್ರಧಾನಿ ನರೇಂದ್ರ ಮೋದಿ ಮತ್ತು ಮಾರಿಷಸ್ ಪ್ರಧಾನಿ ಡಾ. ನವೀನ್‌ಚಂದ್ರ ರಾಮ್‌ಗೂಲಂ ನಡುವೆ ನಡೆದ ನಿಯೋಗ ಮಟ್ಟದ ಮಾತುಕತೆಯ ವೇಳೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮಾತುಕತೆಗಳ ನಂತರ, ನರೇಂದ್ರಮೋದಿ ಜಾಗತಿಕ ದಕ್ಷಿಣಕ್ಕಾಗಿ ಭಾರತದ ಹೊಸ ದೃಷ್ಟಿಕೋನವನ್ನು ಘೋಷಿಸಿದರು, ಅದಕ್ಕೆ "ಮಹಾಸಾಗರ್" ಅಥವಾ "ಪ್ರದೇಶಗಳಾದ್ಯಂತ ಭದ್ರತೆ ಮತ್ತು ಬೆಳವಣಿಗೆಗೆ ಪರಸ್ಪರ ಮತ್ತು ಸಮಗ್ರ ಪ್ರಗತಿ" ಎಂದು ಹೆಸರಿಸಿದರು. ಸಭೆಯಲ್ಲಿ, ಈ ಪ್ರದೇಶದಲ್ಲಿನ ಎರಡೂ ರಾಷ್ಟ್ರಗಳ ಹಂಚಿಕೆಯ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು, ಮಾರಿಷಸ್‌ನ ರಕ್ಷಣೆ ಮತ್ತು ಭದ್ರತಾ ಅಗತ್ಯಗಳನ್ನು ಬಲಪಡಿಸುವಲ್ಲಿ ಭಾರತವು ನಿರಂತರ ಬೆಂಬಲ ಮತ್ತು ಸಹಾಯ ನೀಡಲಿದೆ ಎಂದು ಪ್ರಧಾನಿ ಪುನರುಚ್ಚರಿಸಿದರು.

<><><>

ವಿಶ್ವ ಪ್ಯಾರಾ ಅಥ್ಲಿಟಿಕ್ಸ್ ಗ್ರ್ಯಾಂಡ್ ಪ್ರಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಪ್ರಾಬಲ್ಯ ಮುಂದುವರೆದಿದೆ. ದೆಹಲಿಯ ಜವಹಾರ್‌ಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕ್ರೀಡಾಕೂಟದ ಹಲವು

ಸ್ಪರ್ಧೆಗಳನ್ನು ಭಾರತೀಯ ಅಥ್ಲೀಟ್‌ಗಳು ನಿನ್ನೆ ಉತ್ತಮ ಪ್ರದರ್ಶನ ತೋರಿ ಪದಕಗಳನ್ನು ಸಂಪಾದಿಸಿದ್ದಾರೆ. ಒಟ್ಟಾರೆ ಪದಕ ಪಟ್ಟಿಯಲ್ಲಿ ಭಾರತ ೩೩ ಚಿನ್ನ, ೨೯ ಬೆಳ್ಳಿ ಹಾಗೂ ೩೩ ಕಂಚಿನ ಪದಕಗಳೊಂದಿಗೆ ೯೫ ಪದಕ ಗಳಿಸಿ ಅಗ್ರಸ್ಥಾನದಲ್ಲಿದೆ. ಎನ್‌ಪಿಎ ೨೮ ಪದಕಗಳೊಂದಿಗೆ ೨ನೇ ಸ್ಥಾನದಲ್ಲಿ ಹಾಗೂ ೧೨ ಪದಕಗಳೊಂದಿಗೆ ಉಜ್ಬೇಕಿಸ್ತಾನ ೩ನೇ ಸ್ಥಾನದಲ್ಲಿದೆ. ಸುಮಾರು ೧೫೦ ಭಾರತೀಯ ಪ್ಯಾರಾ ಅಥ್ಲೀಟ್‌ಗಳು ೯೦ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ೩ ದಿನಗಳ ಕ್ರೀಡಾಕೂಟ ಇಂದು ಸಮಾಪನಗೊಳ್ಳಲಿದೆ.

<><><><>

ಭಾರತೀಯ ರಿಸರ್ವ್ ಬ್ಯಾಂಕ್ ಅಕೌಂಟ್ ಅಗ್ರಿಗೇಟರ್ ಪೂರಕ ವ್ಯವಸ್ಥೆಯ ಮೇಲ್ವಿಚಾರಣೆಗಾಗಿ ಸ್ವಯಂ ನಿಯಂತ್ರಣಾ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆರ್‌ಬಿಐ ಬಿಡುಗಡೆ ಮಾಡಿರುವ ಹೇಳಿಕೆಯಂತೆ ಆಸಕ್ತ ಸಂಸ್ಥೆಗಳು ಜೂನ್ ೧೫ರೊಳಗೆ ಪ್ರವಾಹ್ ಹೋಟೆಲ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಎಸ್‌ಆರ್‌ಒ - ಎಎ ಚೌಕಟ್ಟಿನಡಿಯಲ್ಲಿ ನಿಗದಿಪಡಿಸಿರುವ ಎಲ್ಲ ಸಲಹೆ ಸೂಚನೆಗಳನ್ನು ಅರ್ಜಿದಾರರು ಪಾಲಿಸಬೇಕಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>